11	ಹಾಸನ	3.83
12	ಕೊಡಗು	5.00
13	ಮಂಡ್ಯ	7.91
14	ಚಾಮರಾಜನಗರ	4.00
15	ಉಡುಪಿ	6.00
16	ಬೆಳಗಾಂ	8.94
17	ಬಿಜಾಪುರ	4.20
18	ಧಾರವಾಡ	5.85
19	ಉತ್ತರ ಕನ್ನಡ	8.17
20	ಬಾಗಲಕೋಟೆ	6.20
21	ಗದಗ	2.39
22	ಹಾವೇರಿ	0.98
23	ಗುಲ್ಬರ್ಗಾ	5.70
24	ಬಳ್ಳಾರಿ	5.00
25	ಬೀದರ್	5.50
26	ರಾಯಚೂರು	2.55
27	ಕೊಪ್ಪಳ	3.40
	ಒಟ್ಟು	**141.63**

11, (104) ಶ್ರೀ ಹಾಲಪ್ಪ ಹೆಚ್. (ಹೊಸನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2002 ರಿಂದ 2005 ರವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಮಂಜೂರಾದ ನಬಾರ್ಡ್ ರಸ್ತೆ ಕಾಮಗಾರಿಗಳ ಸಂಖ್ಯೆ ಎಷ್ಟು ಹಾಗೂ ಇದಕ್ಕೆ ಖರ್ಚು ಮಾಡಿರುವ ಹಣವೆಷ್ಟು ಹಾಗೂ ಕೈಗೊಂಡಿರುವ ರಸ್ತೆ ಉದ್ದವೆಷ್ಟು ?

ಆ) ಈ ಯೋಜನೆ ಅಡಿಯಲ್ಲಿ ಹೊಸನಗರ ಕ್ಷೇತ್ರಕ್ಕೆ ಎಷ್ಟು ಕಿ.ಮೀ. ಉದ್ದ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಹಾಗೂ ಎಷ್ಟು ಹಣ ಖರ್ಚು ಮಾಡಲಾಗಿದೆ (ವಿವರ ನೀಡುವುದು)

ಇ) ಇಲ್ಲಿಯವರೆವಿಗೆ ಪೂರ್ಣಗೊಂಡಿರುವ ಹಾಗೂ ಅಪೂರ್ಣ ಗೊಂಡಿರುವ ರಸ್ತೆಗಳೆಷ್ಟು? (ವಿವರ ಒದಗಿಸುವುದು)

ಶ್ರೀ ಹೆಚ್. ಡಿ. ಕುಮಾರಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು

ಅ) 2002–03ನೇ ಸಾಲಿನಿಂದ 2004–05ನೇ ಸಾಲಿನವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಆರ್.ಐ.ಡಿ.ಎಫ್–8,9, ಮತ್ತು 10ರಡಿ 1513.00 ಲಕ್ಷ ರೂ. ಮೊತ್ತದಲ್ಲಿ 149.15 ಕಿ.ಮೀ. ಉದ್ದದ 26 ರಸ್ತೆ ಕಾಮಗಾರಿಗಳು ಮಂಜೂರಾಗಿರುತ್ತವೆ. ಈ ಕಾಮಗಾರಿಗಳಿಗೆ ಫೆಬ್ರವರಿ 2006ರ ಅಂತ್ಯದವರೆಗೆ 640.00 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ) ಹೊಸನಗರ ಕ್ಷೇತ್ರದ ವ್ಯಾಪ್ತಿಯಲ್ಲಿ 2004–05ನೇ ಸಾಲಿನಲ್ಲಿ ಆರ್.ಐ.ಡಿ.ಎಫ್–10ರ ಯೋಜನೆಯಡಿ ಕೆಳಕಂಡ 2 ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ಹೆಸರು	ಅಂದಾಜು ಮೊತ್ತ (ಲಕ್ಷ ರೂ.)	ರಸ್ತೆ ಉದ್ದ (ಕಿ.ಮೀ)	ಫೆಬ್ರವರಿ 2006ರವರೆಗೆ ಮಾಡಲಾದ ವೆಚ್ಚ (ಲಕ್ಷ ರೂ.)
ಹಾರೋಹಿತ್ಲು ತಮ್ಮಡಿ ಕೊಪ್ಪ ತಳಲೆ ರಸ್ತೆ ಅಭಿವೃದ್ಧಿ	80.00	8.50	4.56
ಕೋಟೆ ಗಂಗೂರು ಮುದ್ದಿನಕೊಪ್ಪ ರಸ್ತೆ ಅಭಿವೃದ್ಧಿ	35.00	30.00	3.12

ಇ) ಮೇಲೆ ತಿಳಿಸಿರುವ 2 ರಸ್ತೆ ಕಾಮಗಾರಿಗಳು ಇನ್ನೂ ಪ್ರಗತಿಯಲ್ಲಿವೆ.

12, (106) ಶ್ರೀ ಕೃಷ್ಣಮೂರ್ತಿ ಕೆ.ಎಂ, ಎಂಎಲ್ಎ(ಕಡೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಬೆಂಗಳೂರು ಮಹಾನಗರ ಪಾಲಿಕೆಯು ಪಡೆದಿರುವ ಒಟ್ಟು ಸಾಲದ ಮೊತ್ತವೆಷ್ಟು? (ಮೂರು ವರ್ಷಗಳ ಮಾಹಿತಿ ನೀಡುವುದು)

ಆ) ಯಾವ ಯಾವ ಸಂಸ್ಥೆಗಳಿಂದ ಎಷ್ಟೆಷ್ಟು ಸಾಲ ಪಡೆಯಲಾಗಿದೆ;

ಇ) ಯಾವ ಯಾವ ಯೋಜನೆಗೆ ಎಷ್ಟೆಷ್ಟು ಸಾಲದ ಹಣವನ್ನು ಖರ್ಚು ಮಾಡಲಾಗಿದೆ;

ಈ) ಇದುವರೆವಿಗೂ ಎಷ್ಟು ಸಾಲ ತೀರಿಸಲಾಗಿದೆ ಹಾಗೂ ಉಳಿದಿರುವ ಸಾಲದ ಮೊತ್ತವೆಷ್ಟು?